# ಭವಿಷ್ಯ ನಿರ್ಮಾಣ ಕುರಿತು ಉಪನ್ಯಾಸ ಯಶಸ್ವಿ




**ಹಳ್ಳಿಯ ಸಂದೇಶ ನ್ಯೂಸ್**

ಹಳಿಯಾಳ: ಸತತ ಪರಿಶ್ರಮ ಹಾಗೂ ಸಮರ್ಪಣಾ ಮನೋಭಾವದಿಂದ ಯಶಸ್ಸುಗಳಿಸುವಂತೆ ಕುಶಾಲ್ ಕುಲಕರ್ಣಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ವಿದ್ಯಾರ್ಥಿಗಳಿಗೆ ಭವಿಷ್ಯ ನಿರ್ಮಾಣ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಸಪ್ಟೆಂಬರ್ 5 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ " ದಿ ಅನ್ ಸ್ಟಾಪೇಬಲ್ ಯು " ಪುಸ್ತಕದ ರಚನಾಕಾರ ಹಾಗೂ ವೃತ್ತಿ ಮಾರ್ಗದರ್ಶಕರಾದ ದಾಂಡೇಲಿ ಮೂಲದ ಕುಶಾಲ್ ಕುಲಕರ್ಣಿ ಆಗಮಿಸಿದ್ದರು. ಸಮಯದ ಸದ್ಬಳಕೆ ಹಾಗೂ ವಿದ್ಯಾರ್ಥಿ ಜೀವನದಲ್ಲಿ ಯಶಸ್ಸಿಗೆ ಪಾಲಿಸಬೇಕಾದ ಸೂತ್ರಗಳನ್ನು ತಿಳಿಸಿದರು. ಮಾಡುವ ಕೆಲಸದಲ್ಲಿ ಶ್ರದ್ಧೆ , ಸರಿಯಾದ ತಾಲಿಮು ಬದುಕಿನಲ್ಲಿ ಯಶಸ್ಸು ಗಳಿಸಲು ಸಹಕಾರಿಯಾಗುವುದು ಎಂದು ನುಡಿದರು. ವಿದ್ಯಾರ್ಥಿಗಳು ತಮ್ಮಲ್ಲಿನ ನ್ಯೂನ್ಯತೆಯನ್ನು ಮನೋಬಲದಿಂದ ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳಬೇಕೆಂದು ಕರೆ ನೀಡಿದರು. ತಮ್ಮ ಕಣ್ಣುಗಳನ್ನು ಕಳೆದುಕೊಂಡರು ಧೃತಿಗೆಡದೆ,ಅಚಲ ಮನೋಬಲದಿಂದ ಸಾಧನೆಯ ಹಾದಿ ತುಳಿದ ಕಥೆಯನ್ನು ವಿದ್ಯಾರ್ಥಿಗಳೆದುರು ಸಾದರಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿಎ ಕುಲಕರ್ಣಿ ಕುಶಾಲ್ ಅವರ ಜೀವನ ಹಾಗೂ ಸಾಧನೆ, ಮನೋಬಲದ ಸಾಮರ್ಥ್ಯವನ್ನು ತಿಳಿಸುತ್ತದೆ ಎಂದು ಹೇಳಿದರು. ಏಕಾಗ್ರತೆ ಹಾಗೂ ಶ್ರದ್ಧೆ ವಿದ್ಯಾರ್ಥಿ ಜೀವನದಲ್ಲಿ ಅತ್ಯಗತ್ಯ ಎಂದು ಹೇಳಿದರು. ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ರಜತ್ ಆಚಾರ್ಯ ಸ್ವಾಗತಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ವಂದಿಸಿದರು. ಕಂಪ್ಯೂಟರ್ ಸೈನ್ಸ್ (ಎ ಐ ಆಂಡ್ ಎಂ ಎಲ್ ) ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್ ಕಾರ್ಯಕ್ರಮ ಆಯೋಜಿಸಿದ್ದರು. ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್, ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ( ಎಐಆಂಡ್ಎಂಎಲ್ ) ಸಯೋಗದಲ್ಲಿ ಆಯೋಜಿಸಿದ್ದ ಈ ಉಪನ್ಯಾಸ ಕಾರ್ಯಕ್ರಮದಲ್ಲಿ 120ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.